ಡಿಡಬ್ಲ್ಯೂ- 04 ಓ.ಎಸ್. ನಂಃ 218/2010

ದಿನಾಂಕಃ **01.03.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃಃ **ಶ್ರೀ.ಸಿ.ಕೆ.ವಿ ವಕೀಲರಿಂದ**

ಹೆಸರುಃ ಕೆ. ಕೃಷ್ಣಮೂರ್ತಿ
ತಂದೆಯ ಹೆಸರುಃ ಕೆಂಪಣ್ಣ
ವಯಸ್ಸುಃ 50 ವರ್ಷ
ಕೆಲಸಃ ವ್ಯವಸಾಯ
ವಾಸಃ ಕೆಂಪನಹಳ್ಳಿ

ನಾನು ಪ್ರತಿವಾದಿ ಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ. ಅದರಲ್ಲಿ ನನ್ನ ಸಹಿ ಇದೆ.

ಸಾಕ್ಷಿಗೆ ಈಗ ನಿಡಿ.1 ನ್ನು ತೋರಿಸಿದ್ದು ಅದರಲ್ಲಿ ಕಂಡು ಬರುವ ನನ್ನ ಅಣ್ಣ ಸಾದಪ್ಪರವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ.1 (ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **ಶ್ರೀ. ಎಸ್ .ಎ ವಕೀಲರಿಂದ**

ಸಾದಪ್ಪರವರು ನನ್ನ ಅಣ್ಣ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಮಾಡಿಲ್ಲ. ಸಾದಪ್ಪರವ ಹೆಂಡತಿಯ ಹೆಸರು ನಾಗಮ್ಮ. ಅವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು 1 ಗಂಡು ಮಗು. ಹೆಂಡತಿ ಮಕ್ಕಳು ಜೀವಂತವಾಗಿ ಇರುತ್ತಾರೆ. ಮಗ ಬೆಂಗಳೂರಿನಲ್ಲಿ

ಇರುತ್ತಾರೆ. ಹೆಂಡತಿ ಕೆಂಪನಹಳ್ಳಿ ಗ್ರಾಮದಲ್ಲಿ ಇರುತ್ತಾರೆ. 2016 ರಲ್ಲಿ ಸಾದಪ್ಪ ರವರು ತೀರಿಹೋಗಿರುತ್ತಾರೆ. ಸಾದಪ್ಪರವರ ವ್ಯವಹಾರ ಮತ್ತು ವಹಿವಾಟುಗಳ ಖುದ್ದು ಮಾಹಿತಿ ನನಗೆ ಇಲ್ಲ. ನಾನು ಮತ್ತು ನನ್ನ ಅಣ್ಣ ಸಾದಪ್ಪರವರ ಕುಟುಂಬ ಈಗಲೂ ಒಟ್ಟಿಗೆ ಇರುತ್ತದೆ. ನಾನು ಮತ್ತು ಸಾದಪ್ಪರವರು ಒಟ್ಟು ಕುಟುಂಬದ ಸದಸ್ಯರು ಎಂದು ತೋರಿಸುವುದಕ್ಕೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾದಪ್ಪರವರು ಅವರು ಮಾಡುವ ವ್ಯವಹಾರ ವಹಿವಾಟುಗಳ ಬಗ್ಗೆ ಮತ್ತು ಅವರು ಹೋಗಿ ಬರುವ ಬಗ್ಗೆ ಮತ್ತು ಪತ್ರಗಳಿಗೆ ಸಹಿ ಹಾಕಿರುವ ಬಗ್ಗೆ ಮಾಹಿತಿಗಳನ್ನು ಕೊಟ್ಟಿಲ್ಲ. ನನ್ನ ಅಣ್ಣ ಸಾದಪ್ಪರವರು ವಾದಿ ಮತ್ತು ವಾದಿಯವರ ಅಮ್ಮ ವೆಂಕಟಮ್ಮರವರ ಕುಟುಂಬದ ವ್ಯವಹಾರದಲ್ಲಿ ತಾನು ಬಾಗವಹಿಸಿದ ಬಗ್ಗೆ ನನಗೆ ಹೇಳಿಲ್ಲ. ಸದರಿ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ  ಪ್ರಮಾಣ ಪತ್ರದಲ್ಲಿ ನಾನು ನನ್ನ ಅಣ್ಣನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಬರೆಸಿದ್ದೇನೆ ಅದನ್ನು ಬಿಟ್ಟು ಬೇರೆ ಏನು ವಿಚಾರವನ್ನು ಬರೆಸಿಲ್ಲ. ವಾದಿಯ ಅಮ್ಮ ತೀರಿಕೊಂಡು ಸುಮಾರು 20 ವರ್ಷಗಳು ಆಗಿವೆ.

ಪ್ರತಿವಾದಿ 8 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿರುತ್ತೇವೆ ಎಂದರೆ ಸರಿಯಲ್ಲ. ಸಾದಪ್ಪನ ಹೆಂಡತಿ ಮತ್ತು ಮಕ್ಕಳುಗಳು ಆತನ ಸಹಿಗಳನ್ನು ನೋಡಿದರೆ ಗುರುತಿಸುತ್ತಾರೆ. ನಿಡಿ.1 (ಎ) ಸಹಿ ನನ್ನ ಅಣ್ಣನದ್ದು ಅಲ್ಲ ಮತ್ತು ಕೆ ಸಾದಪ್ಪ ರವರು ನನ್ನ ಅಣ್ಣ ಅಲ್ಲ  ಎಂದರೆ ಹೇಳಿದರೆ ಸರಿಯಲ್ಲ . ಪ್ರತಿವಾದಿ 8 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಶಿಡ್ಲಘಟ್ಟ